# ಜನಪದ ರಂಗಭೂಮಿ ಮತ್ತು ಅದರ ಸಾಮಾಜಿಕ ಪ್ರಭಾವ

**ಯಶೋಧ ಬಿ.***

**DOI: https://doi.org/10.5281/zenodo.22107029**

**ABSTRACT**

ಮಾನವನ ಸಹಜ ಭಾವನಾತ್ಮಕ ಅಭಿವ್ಯಕ್ತಿಗಳು, ನಂಬಿಕೆಗಳು ಹಾಗೂ ಗ್ರಾಮೀಣ ಆಚರಣೆಗಳ ಒಗ್ಗೂಡುವಿಕೆಯಿಂದ ಜಾನಪದ ರಂಗಭೂಮಿ ಜೀವತಳೆದಿದೆ. ಕೇವಲ ಮನರಂಜನೆಯ ವೇದಿಕೆಯಾಗಿರದೆ, ಇದು ಧಾರ್ಮಿಕ ಶ್ರದ್ಧೆ, ನೈತಿಕ ಮೌಲ್ಯಗಳ ಬೋಧನೆ ಮತ್ತು ಸಾಮಾಜಿಕ ಒಗ್ಗಟ್ಟಿನ ಪ್ರಬಲ ಸಂವಹನ ಸಾಧನವಾಗಿ ಬೇರೂರಿದೆ. ಯಕ್ಷಗಾನ, ಬಯಲಾಟ, ಸಣ್ಣಾಟ ಹಾಗೂ ವಿಭಿನ್ನ ಗೊಂಬೆಯಾಟಗಳಂತಹ ವಿಶಿಷ್ಟ ಕಲಾ ಪ್ರಕಾರಗಳು ಸಮುದಾಯದ ವಾಸ್ತವಿಕ ಬದುಕಿನ ತಲ್ಲಣಗಳನ್ನು, ಸಂಭ್ರಮವನ್ನು ಹಾಗೂ ಸಾಂಸ್ಕೃತಿಕ ಜೀವಂತಿಕೆಯನ್ನು ನೇರವಾಗಿ ಪ್ರತಿಬಿಂಬಿಸುತ್ತವೆ. ದೇವಾಲಯಗಳ ಜಾತ್ರೆ ಮತ್ತು ಉತ್ಸವಗಳ ಆವರಣದಲ್ಲಿ ಬೆಳೆದುಬಂದ ಈ ಕಲೆಯು ಮಾನವೀಯ ಸಂಬಂಧಗಳನ್ನು ಬೆಸೆಯುವ ಜೊತೆಗೆ ಸಮಾಜದ ತಪ್ಪು-ಒಪ್ಪುಗಳನ್ನು ತಿದ್ದುವ ಜಾಗೃತಿಯನ್ನೂ ಮೂಡಿಸುತ್ತದೆ. ಆಧುನಿಕತೆಯ ಭರಾಟೆ ಮತ್ತು ತಂತ್ರಜ್ಞಾನದ ಪ್ರಭಾವದಿಂದ ಕಲಾಪ್ರಕಾರಗಳು ಮರೆಯಾಗುತ್ತಿರುವ ಇಂದಿನ ದಿನಗಳಲ್ಲಿ, ನಮ್ಮ ಮಣ್ಣಿನ ಮೂಲ ಸಂಸ್ಕೃತಿಯನ್ನು ಹಾಗೂ ಅಸ್ಮಿತೆಯನ್ನು ಕಾಪಾಡಲು ಇಂತಹ ಗ್ರಾಮೀಣ ರಂಗಪರಂಪರೆಯ ರಕ್ಷಣೆ ಅತ್ಯಂತ ಅವಶ್ಯಕವಾಗಿದೆ.

**KEYWORDS:** ಜನಪದ ರಂಗಭೂಮಿ, ಸಾಮಾಜಿಕ ಪ್ರಭಾವ, ಸಾಂಸ್ಕೃತಿಕ ಪರಂಪರೆ, ಗ್ರಾಮೀಣ ಕಲಾಪ್ರಕಾರಗಳು, ಬಯಲಾಟ.

* **ಯಶೋಧ ಬಿ.,** ಸಂಶೋಧನಾರ್ಥಿ, ಜಾನಪದ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

**ಪ್ರಸ್ತಾವನೆ:**

ನಾಗರಿಕತೆ ಬೆಳೆದಂತೆಲ್ಲ ಮಾನವ ಮತ್ತಷ್ಟು ಪ್ರಜ್ಞಾವಂತನಾದ ವಸ್ತು ಸಾಂಪ್ರದಾಯ ಮನುಜ ದೇವನನ್ನೇರಲು ಆರಂಭಿಸಿದ ವಸ್ತ್ರಾಲಂಕಾರ, ದೇಹಾಲಂಕಾರ ಮಾನವನ ನಾಗರಿಕತೆಯ ಮತ್ತೊಂದು ಹೆಜ್ಜೆ ಆಯಿತು. ತನ್ನ ಬಿಡುವಿನ ಅವಧಿಯಲ್ಲಿ ಅವನು ತನ್ನ ಭಾವನೆಗಳನ್ನು ವ್ಯಕ್ತಪಡಿಸಲು ಕುಣಿತ, ನಟನೆ, ನೃತ್ಯಗಳು, ನಾಟಕ ಹುಟ್ಟಿಗೆ ಕಾರಣ ಭಾವಾಭಿವ್ಯಕ್ತಿಯೇ ನಾಟಕವಾಗಿ ಭಾಷೆ ಬೆಳೆದಂತೆಲ್ಲಾ ಅಭಿನಯ ಕುಣಿತಗಳೊಂದಿಗೆ ಸಂಭಾಷಣೆ ಸೇರಿ ಜನಪದ ರಂಗಭೂಮಿ ಹುಟ್ಟಿಗೆ ಕಾರಣ. ರಂಗ ಪರಂಪರೆಯಲ್ಲಿ ಕಲಾವಿದರು ಪಾತ್ರಗಳೊಡನೆ ಅನನ್ಯತೆ ಸೃಷ್ಟಿಸುತ್ತಾರೆ. ರಂಗಭೂಮಿ ನೆಲೆ ಯಾವುದು? ರಂಗಭೂಮಿ ತಿರುವು ಯಾವುದು? ಎಂಬ ಸಂಗತಿಗಳನ್ನು ನೋಡಿದಾಗ ಆಂತರಿಕ ಭಾವನೆಗಳಿಗೆ ಸಂಬಂಧಿಸಿದ ಜನಪದ ರಂಗಭೂಮಿ 'ಗ್ರಾಮ್ಯ ನಾಟಕ' ಬಯಕೆಗಳನ್ನು ಈಡೇರಿಸುವ ಪ್ರತಿಬಿಂಬ. ಕರ್ನಾಟಕ ನಾಟಕದ ಪ್ರಥಮ ಗುರು 'ಶಾಂತ ಕವಿ' ಮತ್ತು 'ಹುಯಿಲಗೋಳ ನಾರಾಯಣರಾಯ'ರು ಕನ್ನಡ ರಂಗಭೂಮಿಯನ್ನು ಜೀವಂತವಾಗಿಸಿದವರು. ರಂಗಭೂಮಿ ಎರಡು ಸಾವಿರ ವರ್ಷದ ಹಿರಿಮೆ ಇದೆ ರಂಗಭೂಮಿ ಮೂರು ಕಾಲಘಟ್ಟಗಳಲ್ಲಿ ಜಾನಪದ ಭೂಮಿ, ವೃತ್ತಿ ಭೂಮಿ, ಹವ್ಯಾಸ ರಂಗಭೂಮಿ 'ಜಾನಪದ' ಅಂದರೆ ಜನಪದ ಕಲಿಕೆ, ಗ್ರಾಮೀಣ ಸಂಸ್ಕೃತಿ ಅವರ ನಂಬಿಕೆ ಆಚರಣೆ ಸಾಮಾಜಿಕ ಮೌಲ್ಯಗಳು ಬಿಂಬಿಸುವ ಜನಪದದ ಪುರಾತನ ಜೀವನ ಸಂಸ್ಕೃತಿ ಉಳಿವಿಗಾಗಿ ತನ್ನದೇ ಆದ ನಡೆ, ನುಡಿ, ಚೆಲುವು, ಒಲವು, ನಿಲುವು, ನರ್ತನ ಮೂಲಕ ಅವಲೋಕಿಸಬಹುದು. ಗ್ರಾಮೀಣ ಭಾಗದ ಕುಣಿತಗಳಿಂದ ಆರಂಭವಾದ ನಮ್ಮ ಭಾರತೀಯರ ರಂಗಭೂಮಿಯು ತದನಂತರ ಸಂಸ್ಕೃತದ ಪ್ರಭಾವಕ್ಕೆ ನಾನಾ ರೂಪ ಪಡೆದುಕೊಂಡಿದೆ. ಕಾಳಿದಾಸ, ಬಾಣನಂತಹ ನಾಟಕಕಾರರ ಪರಿಶ್ರಮದಿಂದ ಭಾರತದ ರಂಗ ಪರಂಪರೆ ಹೊಸದಾಗಿ ಹುಟ್ಟಿಕೊಂಡಿದೆ. ಯಕ್ಷಗಾನ, ಬಯಲಾಟ, ದೊಡ್ಡಾಟ, ಸಣ್ಣಾಟ, ಕಿಳ್ಳೆಕ್ಯಾತರ ತೊಗಲು ಗೊಂಬೆಯಾಟ, ಪುರವಂತರ ಆಟ, ಸಂಗ್ಯಾ ಬಾಳ್ಯಾ ನಾಟಕ, ಶ್ರೀ ಕೃಷ್ಣ ಪಾರಿಜಾತ, ಸೂತ್ರದ ಗೊಂಬೆ ಆಟ ಜನರ ಮನರಂಜನೆಗಾಗಿ ಕಾರ್ಯಕ್ರಮಗಳನ್ನು ಒದಗಿಸುವ ಜವಾಬ್ದಾರಿ ಗ್ರಾಮವಾಸಿಗಳ ಮೇಲೆ ಇರುತ್ತಿತ್ತು. "ಹಿಂದಿನ ಕಾಲದ ನಮ್ಮ ನಾಡಿನಲ್ಲಿ ಹಾಡು, ಕುಣಿತ, ಅಭಿನಯ ನಾಟ್ಯ ಮೊದಲಾದ ಲಲಿತ ಕಲೆಗಳ ಗರ ಹಳ್ಳಿಗಳೇ ಆಗಿದ್ದವು. ಸುಗ್ಗಿಯ ಕೋಲಾಟದ ಕುಣಿತ ನಮ್ಮ ಜಾನಪದರಲ್ಲಿ ಬಹಳ ಪ್ರಾಚೀನ ಕಾಲದಿಂದ ನಡೆದುಕೊಂಡು ಬಂದಿದೆ".[1]

**ರಂಗಭೂಮಿಯ ಉಗಮ ಮತ್ತು ವಿಕಾಸ:**

ಹಾಡು, ಕುಣಿತ ಆಂಗಿಕ ಅಭಿನಯ ಮತ್ತು ರಂಗದ ಮೇಲಿನ ಹಲವಾರು ಕುಶಲತೆಯನ್ನು ಬೆರೆಸಿಕೊಂಡರೆ ಅಂತಹ ಮಾಧ್ಯಮವನ್ನು ರಂಗಭೂಮಿ ಎಂದು ಕರೆಯುವುದು ಅನುಭವಗಳನ್ನು ಪುನರ್ ಸೃಷ್ಟಿಸಿ ಮುಂದಿರುವ ಪ್ರೇಕ್ಷಕನೊಬ್ಬನಿಗೆ ತಾನು ಸಾಧಿಸುವ ಕಾರ್ಯ ಒಪ್ಪಿಸುವ ಕ್ರಿಯೆ. "ಕನ್ನಡ ಜಾನಪದ ರಂಗಭೂಮಿ ಉಗಮ ಈ ದೇವಭಕ್ತರ ಕುಣಿದಾಟದಲ್ಲಿಯೇ ಆಗಿದೆ ಎಂದು ಊಹಿಸಿದರೆ ತಪ್ಪೆನಿಸದು. ನಾಡ ದೊರೆ ನೃಪತುಂಗ ನಾಡೋಜ ಪಂಪ 'ನಾಳ್ ಪಗರಣ' ಮತ್ತು 'ಬೀದಿ ಗೋಟಿ' ಈ ಕುಣಿತಗಳ ನೆಲೆಯಲ್ಲಿಯೇ ರಂಗಭೂಮಿ ಹುಟ್ಟಿಬಂದಿದೆ."[2] ರಂಗಭೂಮಿಯ ಕ್ರಿಯೆಗಳು ನಾಗರಿಕತೆ ಬೆಳೆದ ಮೇಲೆ ಇದ್ದಕ್ಕಿದ್ದಂತೆ ಹುಟ್ಟಿ ಬಂದಿದ್ದಲ್ಲ ಮೌಖಿಕ ಪರಂಪರೆ ವೀರರ ಕಥೆಗಳನ್ನು ಮೇಳ ರೂಪದಲ್ಲಿ ನಡೆಸುತ್ತಿದ್ದರು. ಕಥೆಗಳು ಹಾಡಿನ ರೂಪದಲ್ಲಿ ತಂದು ಕುಣಿತವನ್ನು

ಅವರೊಂದಿಗೆ ಬೆರೆಸಿ ಪ್ರದರ್ಶನ ಆರಂಭಿಸಿದರು. ಜನಪದ ರಂಗಭೂಮಿಯ ಕಲ್ಪನೆ ನೃತ್ಯಗಳ ಸಂಗಮ ಗೊಂಬೆಗಳ ಮೂಲಕ ಮಾನವ ರಂಗ ಭೂಮಿಯ ಅಸ್ತಿತ್ವ ಪಡೆದಿದೆ 'ಜನಪದ ನಂಬಿಕೆ' ಬಹುತೇಕ ಜನಪದ ನೃತ್ಯಗಳಲ್ಲಿ ಧಾರ್ಮಿಕ ನಂಬಿಕೆ, ಧಾರ್ಮಿಕ ಭಾವನೆ, ಅದು ಭಯ, ಭಕ್ತಿಯಿಂದ ಕೂಡಿ. ಕಾಲಾನಂತರದಲ್ಲಿ ನಾಟಕದ ರೂಪ ಪಡೆದಿದೆ. ಕರ್ನಾಟಕ ಜನಪದ ರಂಗಭೂಮಿ 'ಒಂದು ಮಾನವ ರಂಗಭೂಮಿ' ಮತ್ತೊಂದು 'ಗೊಂಬೆಗಳ ರಂಗಭೂಮಿ' ಮಾನವ ಸ್ವರೂಪ ಪಡೆಯಿತು. "ಜನಪದ ರಂಗಭೂಮಿಯ ಕಾಲ ನಿರ್ಣಯ ಮಾಡುವುದು ಸಾಧುವೆನಿಸುವುದಿಲ್ಲ ರಾಮಾಯಣ, ಮಹಾಭಾರತ, ಭಾಗವತ ಇವುಗಳ ಕಥಾ ಭಾಗಗಳ ವಸ್ತುವಾಗಿ ಉಳ್ಳ ಕಥಾ ಪ್ರಸಂಗಗಳು ಇರುವಂತೆಯೇ ಹಲವು ಜನಪದ ಕತೆಗಳನ್ನು ಒಳಗೊಂಡ ಪ್ರಸಂಗಗಳು ಇವೆ".[3] ಜನರು ಕಲೆಯನ್ನು ಪ್ರೀತಿಸುತ್ತಾರೆ ಕಲಾಕಾರನ ಖಾಸಗಿ ಜೀವನವನ್ನು ಸ್ವೀಕರಿಸುವುದಿಲ್ಲ ರಂಗಭೂಮಿ ಪಾವಿತ್ರ್ಯವನ್ನು ಕಾಪಾಡಿಕೊಂಡು ಬರುವುದು ನಮ್ಮೆಲ್ಲರ ಕರ್ತವ್ಯ. ಸಿನಿಮಾ ನಟ ನಟಿಯರಿಗೆ ಸಿಗುವ ಪ್ರಚಾರ ಸಂಭಾವನೆ ಸುಖ ರಂಗಭೂಮಿಯ ನಟ ನಟಿಯರಿಗೆ ಸಿಗುವುದಿಲ್ಲ. ರಂಗಭೂಮಿಯ ಪಾತ್ರಧಾರಿಗಳಿಗೆ ಆ ಸ್ಥಳದ ಪ್ರಚಾರ ಸ್ವಲ್ಪ ಮಟ್ಟಿಗೆ ಸಿಕ್ಕಿತ್ತು ಅಷ್ಟೇ. ಮನುಷ್ಯ ಹೇಗೆ ಆದಿಕಾಲದಿಂದಲೂ ತನ್ನ ಬದುಕಿನಲ್ಲಿ ಹೊಸ ವಿಚಾರಕ್ಕೆ ಮಾರು ಹೋದನು ಹೊಸ ರೂಪಗಳನ್ನು ಸೃಷ್ಟಿಸಿಕೊಂಡು ಮನರಂಜನೆಯ ಒಂದು ನಿಖರ ರೂಪ ಹುಟ್ಟಿದ್ದಲ್ಲ ಚರಿತ್ರೆಯ ಪುಟಗಳನ್ನು ನೋಡಿದಾಗ ಒಂದು ನಂಬಿಕೆ, ಪದ್ಧತಿ, ಆಚಾರ, ವಿಚಾರ ಒಂದು ಪರಂಪರೆ ಮನರಂಜನೆ ಬೆಳೆದು ಬಂದಿದೆ. ಮಾನವ ತನ್ನ ಭಾವನಾತ್ಮಕ ಅನಿಸಿಕೆಗಳನ್ನು ಹೇಳಿಕೊಳ್ಳಲು ಅಭಿನಯದಿಂದ ಹೊಸ ಮುಖವನ್ನು ಪರಿಚಯಿಸುವ ನೋಟವೇ ಜಾನಪದ ರಂಗಭೂಮಿ ಎನ್ನುವಂತೆ ಮಾನವನ ಜೀವನದಲ್ಲಿ ಹೊಸ ತಿರುವು ಸೃಷ್ಟಿಯಾಯಿತು. ಉದಾ: "ಬೆಳ್ಳಿ ಪರದೆಯ ಮೇಲೆ ಒಂದು ಚಿತ್ರವನ್ನು ನೋಡುವುದಕ್ಕೂ ರಂಗಸ್ಥಳದ ಮೇಲೆ ಚಲಿಸುವ ಜೀವಂತ ವ್ಯಕ್ತಿಗಳು ನೋಡುವುದಕ್ಕೂ ವ್ಯತ್ಯಾಸವಿದೆ ಇದೆ ಎಂದು ನಂಬುವನು ಮಾತ್ರ ರಂಗಭೂಮಿ ಮಾಧ್ಯಮದ ಸರ್ವಸ್ವವನ್ನು ಅರ್ಥೈಸಬಹುದು".[4] ಜನಪದ ರಂಗಭೂಮಿಯ ಹೊಸ ಹಾದಿ ಹೊಸ ಭರವಸೆಗಳನ್ನು ತುಂಬುವ ಕ್ಷೇತ್ರ ಮೈ ಮನಸ್ಸುಗಳನ್ನು ಹದಗೊಳಿಸಿಕೊಳ್ಳಬೇಕಾದ ವ್ಯಕ್ತಿತ್ವ ಸೃಷ್ಟಿಸುವ ಜ್ಞಾನದ ಪ್ರಜ್ವಲತೆ ಜಾಗೃತಿಯ ಅಭಿನಯ ಬದುಕಿನಲ್ಲಿ ಅಭಿವ್ಯಕ್ತಿಸುವ ಭಾವನೆಗಳು ಸ್ಪಷ್ಟವಾಗಿ ನಿರೂಪಿಸುವ ಪ್ರವೇಶದ ಮುಖವೇ ರಂಗಭೂಮಿ.

ನಿತ್ಯದ ಬದುಕಿನಲ್ಲಿ ನಮ್ಮ ಪರಿಸರದ ಸುತ್ತಲೂ ಜನರಿಗೆ ಕೇಳಿಸುವಂತೆ ಮಾತನಾಡುವ ಪಾತ್ರಧಾರಿಗಳನ್ನು ಧ್ವನಿಸುವ ಮಾಧುರ್ಯವೇ ಜನಪದ ರಂಗಭೂಮಿ ಭಾವನೆಗಳು ಸ್ಪಷ್ಟವಾಗಿ ನಿರೂಪಿಸಿ "ಪ್ರೇಮಾ, ಶೋಕ, ಭಯ, ಹರ್ಷ, ಜಿಗುಪ್ಸೆ, ರೋಷ, ಅಸೂಯೆ, ಮತ್ಸರ ಮುಂತಾದವುಗಳನ್ನು ಪ್ರೇಕ್ಷಕರಿಗೆ ಮುಖಭಾವದಿಂದ ತೋರಿಸುವ ರಂಗಸ್ಥಳದಿಂದ ತನ್ನ ಸ್ವರದಲ್ಲಿ ತಿಳಿಸುವ ಪ್ರತಿಭೆ ತೋರಬೇಕು ಅವನು ಬೇರೊಬ್ಬ ವ್ಯಕ್ತಿಯೇ ಆಗಿ ಅವನು ಅನುಭವಿಸುವ ಭಾವನೆಗಳು, ವಿಚಾರಗಳು ಆಡುವ ಶಬ್ದಗಳು ನಿರ್ವಹಿಸುವ ಪಾತ್ರಕ್ಕೆ ಜೀವ ತುಂಬುವುದೇ ಜನಪದ ರಂಗಭೂಮಿಯ ಪ್ರತಿಭೆಯ ಹೊಳಪು".[5] ರಂಗಭೂಮಿ ಪ್ರಭಾವ ಮತ್ತು ಅಸ್ತಿತ್ವ ಇಳಿಮುಖವಾದಂತೆಯೇ ರಂಗಭೂಮಿ ಕಲೆಗಳು ಗ್ರಾಮೀಣ ಪ್ರದೇಶಗಳಲ್ಲಿ ಹೆಚ್ಚು ಪ್ರಖರಗೊಳ್ಳಲುದ್ಯುಕ್ತವಾಯಿತೆನ್ನಬೇಕು ಆಧುನೀಕರಣದಿಂದ ರಂಗ ಪ್ರದರ್ಶನಗಳಲ್ಲಿ ಅನೇಕ ಮಾರ್ಪಾಡು ಆಯಿತು. ಗ್ರಾಮೀಣ ರಂಗ ಕಥಾ ವಸ್ತುವಿನಲ್ಲಿ ಹೆಣ್ಣು, ಹೊನ್ನು ಮಣ್ಣಿಗಾಗಿ ಕಾದಾಟ ಧಾರ್ಮಿಕ ಡಾಂಭಾಚಾರ ಮತ್ತು ನಂಬಿಕೆಗಳ

ತಾಕಲಾಟ ಬದುಕಿನ ಗೊಂದಲಕ್ಕೆ ಗ್ರಾಮೀಣ ಭಾಗದಲ್ಲಿ ನಡೆದಿರುವ ಹಲವು ರಂಗ ಚಟುವಟಿಕೆಗಳತ್ತ ನೋಡಬೇಕಾಗಿದೆ. "ನಮ್ಮವರ ನಡುವೆ ಸತ್ಯ ಮಿಥ್ಯ ಸ್ಯಾಣಾರ ವಿಚಾರ ಬೀದಿ ನಾಟಕಗಳನ್ನಿತ್ತದೆ".[6] ಉದಾ: ಜೋಕುಮಾರಸ್ವಾಮಿ, ತುಘಲಕ್, ಸತ್ತವರ ನೆರಳು ಗ್ರಾಮೀಣ ಪ್ರದರ್ಶನಗಳು, ರಂಗಭೂಮಿಯನ್ನು ಜೀವಂತವಾಗಿಸುತ್ತದೆ. ಗ್ರಾಮದ ಸುತ್ತಮುತ್ತಲಿನ ದೊಡ್ಡಾಟ, ಬಯಲಾಟ ಚಟುವಟಿಕೆಯಿಂದ ರಂಗ ತಂತ್ರಗಳನ್ನು ಅಳವಡಿಸಿ ಜೀವಂತ ಜನರ ಜಾಗೃತಿಯಾಗುವ ವ್ಯವಸ್ಥೆ ನಿರ್ಮಾಣವಾಗಬೇಕಾಗಿದೆ. ವಾಸ್ತವ ಬದುಕಿಗೆ ಜನ ಹೊಸತನ್ನು ಹೊಸತನವನ್ನು ಬಯಸುತ್ತಿರುವ ಜನರಿಗೆ ವೇಗದ ಜೀವನಕ್ಕೆ ಹೊಸತನ ಅನಿವಾರ್ಯ ಇದ್ದರೂ ಹಳೆಯ ಕಲೆ ಹಳೆಯ ಸಂಸ್ಕೃತಿಗೆ ಹೊಸ ಆಶೋತ್ತರವನ್ನು ತುಂಬುವ ಜನಪದ ರಂಗಭೂಮಿ ಆಗಿದೆ. "ನಮ್ಮ ಸಂಸ್ಕೃತಿಯನ್ನು ಬಿಟ್ಟು ಹೆತ್ತ ತಾಯಿಯನ್ನೇ ಮರೆತು ನಾವೇ ಬೆಳೆದಿದ್ದೇವೆ ನಾವೇ ಸೃಷ್ಟಿಯಾಗಿದ್ದೇವೆ ಎಂಬ ಭ್ರಮೆಯ ಬದುಕು ಎಷ್ಟು ಸರಿ?".[7] ರಂಗಭೂಮಿ ಸಾಮಾನ್ಯ ಜನರ ಸಂಸ್ಕೃತಿಯಲ್ಲಿ ಗ್ರಾಮೀಣ ಕಲೆಗಳು ಹಬ್ಬ ಹರಿದಿನಗಳ ನಡುವೆ ಸಾಂಪ್ರದಾಯಿಕ ಜೀವನ ಕ್ರಮದಲ್ಲಿ ರಂಗಭೂಮಿ ಮುಖ್ಯ.

ರಂಗ ಪರದೆ ಕಲಾವಿದರು ಆಧ್ಯಾತ್ಮಿಕ ನಾಟಕಕ್ಕೆ ನಿಸರ್ಗದ ರಹಸ್ಯ, ಸರೋವರ, ಹೊಳೆ, ಗುಡ್ಡ ದೇವಸ್ಥಾನ ಚಿತ್ರಗಳು, ಕಲಾಭಿವ್ಯಕ್ತಿಗೆ ನೈಜತೆಯ ಭಾವ ತುಂಬುತ್ತಾರೆ. ರಂಗಭೂಮಿಯ ಬಣ್ಣ ಬಣ್ಣದ ಥಳುಕು ಬೆಳಕಿನಲ್ಲಿ ಕುಣಿದು ಕುಪ್ಪಳಿಸಿ ನಾಟಕಕ್ಕೆ ಮೆರಗು ಕಲಾವಿದರು ನೀಡುತ್ತಾರೆ. 'ಕಲೆ ಎಲ್ಲರನ್ನು ಕೈ ಮಾಡಿ ಕರೆಯುವುದೇ ಜನಪದ ರಂಗಭೂಮಿ' ಕಲೆಯನ್ನು ದೈವದತ್ತವಾಗಿ ಕಲಾವಿದರು ರಂಗಭೂಮಿಯಲ್ಲಿ ಸಿಂಹಾವಲೋಕನ ಮಾಡಿಕೊಂಡಾಗ ರಂಗಭೂಮಿಯ ಮೇಲೆ ಪರದೆಯ ಮುಂದೆ ನಿಂತು ಕುಣಿದು ಕುಪ್ಪಳಿಸಿ ಎಲ್ಲರಿಂದ ಹೊಗಳಿಕೆಯನ್ನು ಮೆಲುಕು ಆಗುತ್ತಾ ಮುಂದೆ ಸಾಗುವುದನ್ನು ನಾವು ನೋಡಬಹುದು. "ಜನಪದ ರಂಗಭೂಮಿಯಿಂದ ಇಂದಿನ ಆಧುನಿಕತೆಯವರೆಗೆ ಬಣ್ಣದ ಬದುಕಿನಲ್ಲಿಯೇ ಬಾಳಿ ಬದುಕುತ್ತಿರುವ ಕೊಂಚ ಕಲಾವಿದರ ಕಲ್ಪನೆ ನಮ್ಮ ಮನದಾಳದಿಂದ ಮರೆಯಾಗುತ್ತಿರುವುದು ಅತ್ಯಂತ ದುಃಖದ ಸಂಗತಿ ಕಲಾವಿದರ ಬದುಕು ಕಷ್ಟದಿಂದ ಕೂಡಿದ್ದರೂ ಹೊಟ್ಟೆಗೆ ಹಿಟ್ಟು ಇರದಿದ್ದರೂ ಬಟ್ಟೆ ಮೇಲೆ ಬಣ್ಣ ಹಾಕಿ ಬದುಕನ್ನು ನಡೆಸುವವರು ಇಂದಿಗೂ ಇದ್ದಾರೆ".[8]

"ಜನಪದ ರಂಗಭೂಮಿ ಹಳ್ಳಿಗಳಲ್ಲಿ ಬೆಳೆದಿರುವುದರಿಂದ ಅವರ ಜೀವನ ವಿಧಾನ ರೀತಿ ನೀತಿ ಚಾತುರ್ಯ ಚಮತ್ಕಾರ ಆದರ್ಶ ಮೌಲ್ಯ ಇವೆಲ್ಲ ಚಿತ್ರಿತವಾಗಿರುತ್ತವೆ ಜಾನಪದ ನಾಟಕ ಹಳ್ಳಿಯ ಬದುಕಿನ ಅಂತಃಸತ್ವಕ್ಕೆ ಹಿಡಿದ ಕನ್ನಡಿ ಎಂದು ಹೇಳಬಹುದು".[9] ಬಯಲಾಟದ ಜೀವಂತಿಕೆ ಇರುವುದು ಹಳ್ಳಿಗಳಲ್ಲಿ ಸಂಪ್ರದಾಯ ನಡೆದಿದ್ದರೂ ಹೊಸ ಬದಲಾವಣೆಗಳನ್ನು ತನ್ನೊಡನೆ ಸೇರಿಸಿಕೊಂಡು ಜೀವಿಸುವ ಜನರು ಇದ್ದಾರೆ. ಕಥಾವಸ್ತುವಿಗೆ ಪುರಾಣ ಪುರುಷರ ಮಹಾಮಹಿಮರ ಚರಿತ್ರೆ ಜಾನಪದ ರಂಗ ಭೂಮಿಯಾಗಿದೆ. ಒಟ್ಟಾರೆ "ರಂಗ ಭೂಮಿ ಧರ್ಮ ಮೂಲವಲ್ಲ ಎಂದು ನಿರ್ಧರಿಸಿದರು ಆ ಮೇಲಿನ ಬೆಳವಣಿಗೆಗೆ ಧರ್ಮದ ನಂಟುತನವನ್ನು ಹೇಳುವವರಿದ್ದಾರೆ. ಶಿಷ್ಟ ರಂಗಭೂಮಿ ಹೇಗೋ ಈ ಧರ್ಮ ವಲಯವನ್ನು ದಾಟಿಕೊಂಡು ಹೊರಬಂದಿರುವುದಂತೂ ಅಷ್ಟೇ ಸತ್ಯ. ಖಚಿತ ದಾಖಲೆಗಳನ್ನು ಹೊಂದಿರದ ಜಾನಪದ ರಂಗಭೂಮಿಗೆ ಧರ್ಮದೊಂದಿಗಿರುವ ತನ್ನ ಸಂಬಂಧವನ್ನು ಅಲ್ಲಗೆಳೆಯುವುದು ಅಷ್ಟೊಂದು ಸುಲಭವಿಲ್ಲ".[10]

**ಜನಪದ ರಂಗಭೂಮಿ ವೈಶಿಷ್ಟ್ಯತೆ:**

- **ಧಾರ್ಮಿಕ ನಂಬಿಕೆ:** ಹಬ್ಬ ಹರಿದಿನ ಜಾತ್ರೆ, ಉತ್ಸವ ದೇವಸ್ಥಾನಕ್ಕೆ ಸಂಬಂಧ ಹೊಂದಿದೆ.
- **ಸಂಗೀತ ಸ್ಥಾನ:** ಹಬ್ಬ ಹರಿದಿನ ಸಮಯಕ್ಕೆ ಹಾಡು ಕಥೆ ನೃತ್ಯಗಳಿಗೆ ವಾದ್ಯಗಳು ಸ್ಥಾನ ತುಂಬುತ್ತವೆ.
- **ನೇರ ಸಂವಹನ:** ಸಾಮಾನ್ಯ ಜನರೊಂದಿಗೆ ಹೊಸ ನೆಲೆಯನ್ನು ಸೃಷ್ಟಿಸುವ ಕಲಾವಿದರೊಂದಿಗೆ ಪ್ರೇಕ್ಷಕರ ಬಾಂಧವ್ಯ ಬೆಳೆಯುತ್ತದೆ.

ಜನಪದ ರಂಗ ಭೂಮಿ ಜನಸಾಮಾನ್ಯರ ಸಾಂಸ್ಕೃತಿಕ ಜೀವನಕ್ಕೆ ಅಗತ್ಯ ಜೀವನ ವಿಧಾನ ಪರಿಸರ ಸಾಮಾಜಿಕ ಆಸೆ ಆಕಾಂಕ್ಷೆ ಮೌಲ್ಯ ಭಾವಕ್ಕೆ ರಂಗದ ಮೇಲೆ ಹೊಸ ಬಿಂಬ ಸೃಷ್ಟಿಯಾಗುತ್ತದೆ. ಧರ್ಮದ ಸೀಮಿತ ನೆರಳಿನಲ್ಲಿ ಬೆಳೆಯದೆ ಜನಸಾಮಾನ್ಯರ ಮನರಂಜನೆಯಲ್ಲಿ ಹುಟ್ಟಿಕೊಂಡು ಜಾನಪದ ರಂಗಭೂಮಿಯ ಬೆಳವಣಿಗೆಗೆ ಜಾತ್ರೆಗಳು ಬಹಳಷ್ಟು ವಿಶೇಷ ಹಳ್ಳಿಗಳಲ್ಲಿ ವರ್ಷಕ್ಕೊಮ್ಮೆ ದೇವರ ಜಾತ್ರೆ ನಡೆಯುವಾಗ ಸುತ್ತಲೂ ಹಳ್ಳಿ ಜನ ಬಂದು ಸೇರುವ ಜಾಗವೇ ಜಾನಪದ ರಂಗಭೂಮಿ. ಸಾಂಸ್ಕೃತಿಕ ದೃಷ್ಟಿಯಿಂದ ಹಿಂದೆ ಜನಸಾಮಾನ್ಯರು ಪೇಟೆ ಪಟ್ಟಣಗಳ ಮೊರೆ ಹೋಗುತ್ತಿರುವುದು ಕಡಿಮೆ ಯಾಕೆಂದರೆ ಜಾತ್ರೆ ನಡೆಯುವಾಗ ಹಳ್ಳಿ ಜನರಿಗೆ ಅವಶ್ಯಕ ವಸ್ತುಗಳನ್ನು ಕೊಳ್ಳುವ ವ್ಯಾಪಾರ ಕೇಂದ್ರವಾಗಿ ಸೃಷ್ಟಿಸುವ ಮನರಂಜನೆಯ ತಾಣವೇ ಜಾನಪದ ರಂಗಭೂಮಿ ಆಗಿ ತತ್ತು. ದೊಡ್ಡ ದೊಡ್ಡ ಜಾತ್ರೆಗಳಲ್ಲಿ ಹಲವು ಮೇಳಗಳು ಕೂಡಿ ಸ್ಪರ್ಧೆಗಳಿದ್ದು ಬಯಲಾಟಗಳನ್ನಾಡುತ್ತಾರೆ. ಜಾತ್ರೆಗಳೇ ನಮ್ಮ ಜಾನಪದ ರಂಗ ಭೂಮಿ ಬೆಳವಣಿಗೆಗೆ ಮುಖ್ಯ ಕಾರಣ. ಜಾನಪದ ರಂಗಭೂಮಿ ತನ್ನ ಅಭಿವೃದ್ಧಿಗೆ ಮೂಲ ಆಧಾರ ದೇವರ ನಿಷ್ಠೆಯನ್ನು ಜನ ಜೀವನದೊಂದಿಗೆ ಇಟ್ಟುಕೊಂಡಿರುವ ಸಂಬಂಧ ದೇವಾಲಯಗಳು ಬರೀ ಉಪಾಸನಾ ಕೇಂದ್ರಗಳಾಗಿರದೆ ಸಮಾಜದ ಸಾಂಸ್ಕೃತಿಕ ಕೇಂದ್ರಗಳು ಆಗಿದ್ದವು. ಹಳ್ಳಿಗಳಲ್ಲಿ ಮದುವೆ, ಉತ್ಸವ, ದೇವಾಲಯಗಳ ಸ್ಥಾಪನೆಗೆ ಬಯಲಾಟಗಳ ಅಭ್ಯಾಸ ಗುಡಿಗಳಲ್ಲಿ ನಡೆಯುತ್ತಿದ್ದವು. "ಗುಡಿಯೇ ಮೊದಲು ರಂಗಸ್ಥಳವಾಗಿದ್ದು ಬರುಬರುತ್ತಾ ಅದು ಪ್ರೇಕ್ಷಕ ವರ್ಗಕ್ಕೆ ಕಿರಿದೆನಿಸಿದಾಗ ಬಯಲಿಗೆ ಬಂದು ಬಯಲಾಟವಾಗಿರುವಲ್ಲಿ ಸಂದೇಹವಿಲ್ಲ 'ರಾಸಮಂಟಪ' ಎಂದು ಕರೆಯುತ್ತಾರೆ".[11]

ದೇವಾಲಯಗಳ ಮಠಗಳ ಆವರಣದಲ್ಲಿ ಬಯಲಾಟಗಳು ಪ್ರದರ್ಶಿತವಾಗುವುದು ಸಾಮಾನ್ಯ ಜನಪದ ರಂಗಭೂಮಿ ಎಲ್ಲೆಡೆ ಏಕ ಕಾಲದಲ್ಲಿ ಹುಟ್ಟಿಲ್ಲ ಒಂದು ಕಡೆ ಹುಟ್ಟಿ ವಿವಿಧೆಡೆಗೆ ಹರಡುವ ಸ್ವಾಭಾವಿಕ ಕ್ರಿಯೆ ರೂಪ ಪಡೆದಿದೆ ಮನಸ್ಸಿಗೆ ಆನಂದ ತುಂಬುವ ಜೊತೆಗೆ ಹೊಸ ಬಗೆಯನ್ನು ರಂಗ ಭೂಮಿ ಪ್ರಾರಂಭಿಸುತ್ತದೆ. "ನಾಟಕವು ಧರ್ಮಕ್ಕಿಂತ ಪ್ರಾಚೀನವಾದುದು ಮನುಷ್ಯನಿಗೆ ಧರ್ಮ ಆಚರಣೆಗಳ ವಿಚಾರ ಹೊಳೆಯುವುದಕ್ಕಿಂತ ಪೂರ್ವದಲ್ಲಿಯೇ ನಾಟಕದ ಉದಯವಾಗಿರಲು ಸಾಧ್ಯ ನಾಟಕದ ಅನುಕರಣ ಮೂಲ ಸಿದ್ಧಾಂತ ಎಂದು ಕರೆಯಬಹುದು".[12]

**ಜನಪದ ರಂಗಭೂಮಿ ಮಹತ್ವದ ಪಾತ್ರ:**

ಜನಸಾಮಾನ್ಯರ ದೃಷ್ಟಿಯಿಂದ ಜನಪದ ರಂಗಭೂಮಿ ಮನರಂಜನೆ ತಾಣ. ಸಂತೋಷ ದುಃಖ ಜೊತೆಗೆ ಜ್ಞಾನವನ್ನು ನೀಡುತ್ತಾ ಬದುಕಿಗೆ ಹತ್ತಿರವಾದ ಹೃದಯವೇ ಜನಪದ ರಂಗಭೂಮಿ. "ತೊಗಲುಗೊಂಬೆ ಆಟವನ್ನು ಆಡಿಸಿದರೆ ಮಳೆ ಬರುತ್ತದೆ ದನಗಳ ರೋಗ ನಿವಾರಣೆಯಾಗುತ್ತದೆ".[13] ಗ್ರಾಮ ದೇವತೆ ಜಾತ್ರೆ ನಡೆಯುವಾಗ ಬಯಲಾಟ

ಪ್ರದರ್ಶನ ನಡೆಸುತ್ತಿದ್ದರು ಅದನ್ನು 'ದೇವರ ಆಟ' ಎಂದು ಕರೆದರು ಬದುಕಿನ ಆಶಯವನ್ನು ಪ್ರಬಲಗೊಳಿಸಲು ಸಂದರ್ಭಗಳು ಹುಟ್ಟಿಕೊಂಡವು. ರಂಗಭೂಮಿ ಮನುಷ್ಯನಲ್ಲಿ ಆತ್ಮವಿಶ್ವಾಸವನ್ನು ಬೆಳೆಸುತ್ತದೆ. ಸಮಾಜದ ಸರಿ ತಪ್ಪುಗಳನ್ನು ತಿದ್ದುವ ಜೊತೆಗೆ ಮಾನವೀಯ ಮೌಲ್ಯಗಳು ಮತ್ತು ಬಹುಮುಖ ಪ್ರತಿಭೆ ಬೆಳೆಸುವ ವೇದಿಕೆ ಆಗಿರುತ್ತದೆ. ರಂಗಭೂಮಿ ಹೊಸ ಸಾಮಾಜಿಕ ವ್ಯವಸ್ಥೆಗೆ ಸಹ ಧ್ವನಿಸುತ್ತದೆ ರಂಗಭೂಮಿ ಜೀವನ ಸಾಗಿ ಬಂದ ದಾರಿಯನ್ನು ಹೊಕ್ಕು ಬಳಸಿದ ತಿರುವು ಮುರುವುಗಳ ಏರಿಳಿತಗಳನ್ನು ನಮಗೆ ಮನಗಾಣಿಸುತ್ತದೆ. ಗ್ರಾಮೀಣ ಭಾಗದಲ್ಲಿ ಕಲೆಗಳ ಮೂಲಕ ಒಳ್ಳೆಯ ಮತ್ತು ಕೆಟ್ಟ ವಿಚಾರವನ್ನು ಜನಪದ ಬಾಯಿಯಲ್ಲಿ ಆಡಿಸುತ್ತದೆ. ಪ್ರತಿಯೊಂದು ಆಶಯಗಳನ್ನು ನೆರವೇರಿಸುವ ನಂಬಿಕೆಯೇ ರಂಗಭೂಮಿ ಜನಪದ ಕಲೆಗಳು ಏಕ ಸ್ವಾಮ್ಯ ಕ್ಕೆ ಅಂದರೆ ಸ್ವಂತಿಕೆಯನ್ನು ಕಳೆದುಕೊಂಡು ಕೇವಲ ಅನುಕರಣೆಗೆ ತುತ್ತಾಗುತ್ತಿದೆ.

**ಜನಪದ ರಂಗಭೂಮಿ ಕಲಾವಿದರಿಗೆ ಪ್ರೇರಣೆ:**

ನಮ್ಮ ನೆಲ, ಜಲ, ಸಂಸ್ಕೃತಿ ಹಲವು ಪತನಗಳ ಪ್ರಕ್ರಿಯೆಗಳಲ್ಲಿ ಉದಯಿಸಿದ ಹೊಸ ಮಾರ್ಗವೇ ರಂಗಭೂಮಿ ಜಾನಪದವನ್ನು ಅರ್ಥಮಾಡಿಕೊಳ್ಳಲು ನಂಬಿಕೆಗಳು, ಆಚರಣೆಗಳು, ಸಂಸ್ಕೃತಿ ಮುಖ್ಯ. "ಕನ್ನಡ ಜನಪದ ರಂಗಭೂಮಿಯು ಮೂಲ ದೈವಾರಾಧನೆಯಲ್ಲಿಯೇ ದೈವವನ್ನೋ ದೆವ್ವವನ್ನೋ ತೃಪ್ತಿಪಡಿಸಿ ತಮ್ಮ ಏಳಿಗೆಯನ್ನು ಕಂಡುಕೊಳ್ಳುತ್ತಿದ್ದ ಹಳ್ಳಿಗಳ ಆರಾಧನೆಯಲ್ಲಿ ದೈವ/ ದೆವ್ವದ ಅನುಕರಣೆ ಅನಿವಾರ್ಯವಾಗಿತ್ತು".[14] ನಾಟಕ ಆರಾಧನೆಗಳು ಮನುಷ್ಯರ ಮನಸ್ಸಿಗೆ ಭಾವನಾತ್ಮಕವಾಗಿ ಸಾಮೂಹಿಕವಾಗಿ ನೃತ್ಯಗಳು ಹುಟ್ಟಿಕೊಂಡವು ಕೋಲಾಟ, ಪುರವಂತರ ಕುಣಿತ, ಬೀರದೇವರ ಕುಣಿತ, ವೀರಭದ್ರನ ಕುಣಿತ, ಇವುಗಳ ಮೂಲಕ ಅಭಿನಯ ಆರಂಭವಾಯಿತು. ನಾಟಕ ಚೌಕಟ್ಟಿನಲ್ಲಿ ಜಾನಪದ ರಂಗ ಪ್ರವೇಶ ಸಂಗ್ಯಾ ಬಾಳ್ಯಾ, ಶ್ರೀ ಕೃಷ್ಣ ಪಾರಿಜಾತ, ಮುಕುಂದ ಗೋವಿಂದ, ಯಕ್ಷಗಾನ, ಬಯಲಾಟ, ಸೂತ್ರದ ಗೊಂಬೆ ಆಟ, ಮೂಡಲಪಾಯದ ಆಟಗಳು, ಕಿಳ್ಳೆಕ್ಯಾತರ ತೊಗಲು ಗೊಂಬೆಯಾಟ, ಸಣ್ಣಾಟ, ಕಥೆ, ಸಂಗೀತ, ಹಾಡು, ಕುಣಿತ ಸರಸವಾದ ಸಂಭಾಷಣೆ ರಂಗಭೂಮಿ.

**ಗೊಂಬೆಯಾಟ:** ಜನಪದ ರಂಗಭೂಮಿಯಲ್ಲಿ ಜನಪ್ರಿಯವಾದ ಪ್ರಕಾರವೆಂದರೆ ಗೊಂಬೆಯಾಟ ಗೊಂಬೆಗಳಿಗೆ ಪಾತ್ರಗಳಂತೆ ವೇಷ ತೊಡಿಸಿ ಅಲಂಕಾರ ಮಾಡಿ ಮಾನವ ಅನುಕರಣೆ ಮಾಡಿ ಜೀವ ತುಂಬುವುದೇ ಸೂತ್ರದ ಗೊಂಬೆಯಾಗುತ್ತದೆ. ಪಾತ್ರಗಳಂತೆ ವೇಷ ಭೂಷಣ ಧರಿಸಿ ಗೊಂಬೆ ಸೂತ್ರ ಹಿಡಿದು ಆಡಿಸುವುದೇ ಸೂತ್ರಧಾರ. ಉದಾ: ಮಹಾಭಾರತ, ರಾಮಾಯಣ, ಭಾಗವತನ ಕಥಾ ವಸ್ತುಗಳ ಶಬ್ದ ವಿಶ್ಲೇಷಣೆ ಸಂಯೋಜನೆ ಆಗಿರುತ್ತದೆ.

**ತೊಗಲು ಗೊಂಬೆ ಆಟ:** ಮಾನವ ಮತ್ತು ಪ್ರಾಣಿ ಪಕ್ಷಿಗಳ ಆಕಾರಕ್ಕೆ ತೆಳ್ಳಗಾಗುವ ಚರ್ಮವನ್ನು ಹದ ಮಾಡಿ ಪಟ್ಟಿಗಳನ್ನು ಹಣೆದು ಕತ್ತರಿಸಿ ಆಕಾರ ಮಾಡಿ ಅವುಗಳಿಗೆ ಅಂಗಿ, ಉಡುಪು, ಕೇಶ, ಬಣ್ಣ ತುಂಬಿ ವರ್ಣ ರಂಜಿತ ಆಕಾರಗಳು ಹತ್ತು ತಲೆಯ ರಾವಣ ಸಾವಿರ ಎಡೆಯ ಆದಿ ವಿಶೇಷ ಪರಿಣಾಮಕಾರಿ ಚಿತ್ರಗಳನ್ನು ನಡೆದಾಡುವಂತೆ ಕುಣಿಯುವಂತೆ ಹಾರುವಂತೆ ಕಥನವಾಡುವಂತೆ ಸಂಭಾಷಣೆ ಕೈಯಿಂದ ಆಡಿಸುವ ವಿಶೇಷ ಕಿಳ್ಳೆ ಕ್ಯಾತರೆಂಬುವರು ತೊಗಲುಬೊಂಬೆಯ ಕಲೆಯಲ್ಲಿ ನಿಷ್ಣರು.

**ಬಯಲಾಟ:** ಬಯಲಾಟ ಆಟಕ್ಕೆ ಆಟ್ಟದಾಟ, ದೊಡ್ಡಾಟ ಬಯಲಾಟ, ದೊಂಬಿದಾಸರ ಕುಣಿತ, ದಶಾವತಾರದ ಆಟ ಎಂಬ ಹೆಸರು ಇದೆ, ಹಾಡು, ಕುಣಿತ, ಹಾಸ್ಯ ಪುರಾಣದ

ಪ್ರಸಂಗಗಳೇ ಬಯಲಾಟದ ಕಥಾವಸ್ತು ರಾತ್ರಿಯಿಂದ ಮುಂಜಾವಿನವರೆಗೆ ನಡೆಯುವ ರಂಗ ಆಟವಾಗಿದೆ ಬಯಲಾಟ ಬಯಲು ಸೀಮೆಯ ಹಳ್ಳಿಯ ಪ್ರದರ್ಶನ ಮನರಂಜನೆ ಆಟವಾಗಿದೆ.

**ಸಣ್ಣಾಟ:** ಬಯಲಾಟಕ್ಕೂ ವೃತ್ತಿನಿರತ ರಂಗಭೂಮಿಗೂ ಮಧ್ಯದ ಮೈಲಿಗಲ್ಲು ಸಾಧು–ಸಂತರ ಪೌರಾಣಿಕ ಕಥೆಗಳ ಮಧ್ಯ ಬಯಲಾಟದ 'ಛಾಯೆ' ಮೂಡಿಸುವ ಪರಿ ಇದಾಗಿದೆ.

**ಯಕ್ಷಗಾನ:** ಜಾನಪದ ರೂಪದಲ್ಲಿ ಜನಪ್ರಿಯವಾಗಿ ಬದುಕಿ ನಿಂತಿರುವುದು ಯಕ್ಷಗಾನ ನಾಟ್ಯ ಕಲಾ ರೂಪದಲ್ಲಿ ಜೀವನ ಪ್ರಜ್ಞೆಯಿಂದ ನಿರ್ಮಿತವಾಗಿ 'ಭಾಗವತ ಧರ್ಮ' ಎಂದು ಕರೆದರು. ಯಕ್ಷಗಾನ ನಾಟ್ಯಕಲೆಯ ಇನ್ನೊಂದು ಮೆಟ್ಟಿಲು ಎಂದು ಹೇಳಬಹುದು. ಶ್ರೀ ಹರಿ ಮತ್ತು ಹರಿ ಭಕ್ತರ ಕಥಾ ವಸ್ತುವನ್ನೇ ಆಧರಿಸಿ ಶಿವಲೀಲೆ ಶಿವ ಭಕ್ತರ ಮಹಿಮೆಗಳನ್ನು ರಂಗದ ಮೇಲೆ ಪ್ರದರ್ಶಿಸುವುದೇ ಯಕ್ಷಗಾನ.

**ಜನಪದ ರಂಗಭೂಮಿ ಬದಲಾದ ವ್ಯವಸ್ಥೆ:**

ಕಲೆಗಳ ಅಳಿವು ಉಳಿವು ಪ್ರತಿಯೊಬ್ಬರ ಭಾವನಾತ್ಮಕ ಸಮ್ಮಿಲ ವಾದ ಭಾಗ ಇಡೀ ಕಲಾವಿದರಿಗೆ ಡಾ. ಜೀ ಶಂ. ಪರಮಶಿವಯ್ಯನವರು ದಕ್ಷಿಣ ಕರ್ನಾಟಕ ಜಾನಪದ ರಂಗ ಭೂಮಿಗೆ ಒಂದು ಜೀವಕಳೆ ತಂದವರು. ಜಾನಪದ ರಂಗಭೂಮಿ ವೀಕ್ಷಕರಿಗೆ ವಿಶಿಷ್ಟವಾದದ್ದು ಜಾತ್ರೆ ಅಥವಾ ಉತ್ಸವದಲ್ಲಿ ಒಂದು ಪ್ರದರ್ಶನ ಏರ್ಪಡಿಸುವ ಹಳ್ಳಿ, ಗ್ರಾಮ ನಗರ, ಪಟ್ಟಣದಲ್ಲಿ ಸಂಭ್ರಮ ಉತ್ಸಾಹ ಸಡಗರ ತುಂಬಿರುತ್ತದೆ. ಯಕ್ಷಗಾನ ಬಯಲಾಟ ಸಣ್ಣಾಟ ಆಟಗಳು ರಾತ್ರಿಯ ಆರಂಭವಾಗುವ ಮುಂಚೆ ಸಂಜೆ ಕೂರಲು ಸ್ಥಳ ಹಿಡಿಯುತ್ತಿದ್ದರೂ ಕೆಲವರು ಚಾಪೇ ಗೋಣೀಚೀಲ ಹಾಕುತ್ತಿದ್ದರು ಪಾತ್ರಧಾರಿಗಳ ವೇಷಭೂಷಣದ ಬಗ್ಗೆ ವಿಮರ್ಶೆ ನಡೆಯುತ್ತಿತ್ತು. ಈ ದಿನಗಳಲ್ಲಿ ಪಾತ್ರಧಾರಿಗಳೇ ಕೈಯಿಂದ ಹಣ ಹಾಕಿಕೊಂಡು ಕಲಾವಿದರು ಸೇರಿ ಆಟ ಕಲಿತು ಅದಕ್ಕೆ ತಗಲುವ ಖರ್ಚನ್ನು ತಾವುಗಳೇ ಹಂಚಿಕೊಂಡು ಪ್ರದರ್ಶನವನ್ನು ನೀಡುವ ವ್ಯವಸ್ಥೆ ಹಿಂದಿನಿಂದ ಬಂದಂತೆಯೇ ಇಂದೂ ಇದೆ. ಕಲಾವಿದರು ಹಳ್ಳಿಗಳಲ್ಲಷ್ಟೇ ಅಲ್ಲದೆ ನಗರಗಳಿಗೆ ಬಂದು ಪ್ರದರ್ಶನ ನೀಡುವ ಸೌಜನ್ಯ ಕಲಿತವರೂ ಬಣ್ಣ ಹಾಕಿ ಕುಣಿಯುವ ಆಕರ್ಷಣೆ ಹೊಸದಾಗಿದೆ. ನಾಟಕಗಳು ಮನಸ್ಸಿನ ಸ್ಥಿತಿ ಅನ್ವಯಿಸಿಕೊಂಡು ಹುಟ್ಟುತ್ತದೆ ಅದೇ ದಿನವೇ ಸಾಯುತ್ತದೆ. ಜನಪದ ರಂಗಭೂಮಿ ಪ್ರೇಕ್ಷಕನ ಅಭಿಪ್ರಾಯದಂತೆ ಹೇಳುವುದಲ್ಲ ಹಾಡು, ಬೆಳಕು, ರಂಗ ವಿನ್ಯಾಸ ರಂಗ ಚಲನೆ, ವೇಷಭೂಷಣ, ವಸ್ತು ಜನ ಸಾಮಾನ್ಯರಿಗೆ ಅರ್ಥವಾಗುವ ಹಾಗೆ ಪ್ರದರ್ಶಿಸುವುದೇ ಜನಪದ ರಂಗಭೂಮಿ. ಆಧುನಿಕತೆ ಬಯಲಾಟದ ಅಂತ ರಂಗ ಬಹಿರಂಗಗಳ ಸತ್ವ ಇಂದು ಕಡಿಮೆಯಾಗುತ್ತಿದೆ. ಆಧುನಿಕ ನಾಗರಿಕತೆಯ ಪ್ರಭಾವದ ಸೆಳವು ಅಸ್ತಿತ್ವವನ್ನೇ ಅಲ್ಲಾಡಿಸುತ್ತದೆ. ಒಂದು ದಿನ ಬಂಧು ಬಾಂಧವರೊಂದಿಗೆ ಖುಷಿಯಾಗಿ ಹಂಚಿಕೊಳ್ಳುವ ಕಾಲ ಹೋಗಿದೆ. ಜನಪದ ಕಲೆಗಳಿಗೆ ಸ್ಥಳೀಯ ಪ್ರತಿಭೆಗಳಿಗೆ ಅವಕಾಶವನ್ನೊದಗಿಸುವ ಒದಗಿಸುವ ಸಂದರ್ಭ ಕಲ್ಪಿಸುವ ತಮ್ಮ ಪ್ರತಿಷ್ಠೆ ಮೆರೆಸುವ ಮೌಲ್ಯಗಳನ್ನು ಪ್ರದರ್ಶಿಸುತ್ತಾ ಮಾನವನ ಬದುಕಿನ ಜನಪದ ರಂಗ ಭೂಮಿ ಜೀವನದಲ್ಲಿ ನಡೆದಾಡುವ ನಾಣ್ಯಗಳಿದ್ದಂತೆ ಜನತೆಯ ಜೀವನಾನುಭವದಲ್ಲಿ ಮೂಡಿ ಬಂದ ಜನಪದ ರಂಗಭೂಮಿ ಇಂದಿಗೂ ಜೀವಂತವಾಗಬೇಕು.

**ಕೊನೆ ಟಿಪ್ಪಣಿಗಳು:**

1. ಬೆಟಗೇರಿ ಕೃಷ್ಣಶರ್ಮಾ, (1976), ಕನ್ನಡ ಜಾನಪದ ಸಾಹಿತ್ಯ, ಧಾರವಾಡ: ಕರ್ನಾಟಕ ವಿಶ್ವವಿದ್ಯಾಲಯ, ಪು.ಸಂ. 71
2. ಅದೇ, ಪು.ಸಂ. 72
3. ರಾಜೇಂದ್ರ ಡಿ. ಕೆ., (1986), ಮುರಾವು, ಮೈಸೂರು: ತಳಗವಾಡಿ ಪ್ರಕಾಶನ, ಪು.ಸಂ. 124
4. ಜಯಪ್ರಕಾಶ ಮಾವಿನಕುಳಿ, (2001), ರಂಗ ಪ್ರತಿಸ್ಪಂದನ, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಪು.ಸಂ. 93
5. ಅದೇ, ಪು.ಸಂ. 131
6. ಪಾರ್ಶ್ವನಾಥ್ ಎಚ್. ಎ., (1995), ರಂಗಸಂಗ, ಮೈಸೂರು: ನಿತಿನ್ ಪ್ರಕಾಶನ, ಪು.ಸಂ. 83
7. ಅಪ್ಪಗೆರೆ ತಿಮ್ಮರಾಜು, (2017), ಬದಲಾಗುತ್ತಿರುವ ಜಾನಪದ ಸಮಗ್ರ ಜಾನಪದ ಲೇಖನಗಳು, ಬೆಂಗಳೂರು: ಸಿರಿವರ ಪ್ರಕಾಶನ, ಪು.ಸಂ. 64
8. ಭೀಮನಗೌಡ ಎಫ್. ಪಾಟೀಲ್, (2010), ರಂಗ ಪರದೆಗಳು, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಪು.ಸಂ. 81
9. ಬಸವರಾಜ ಮಲ್ಲಶೆಟ್ಟಿ ಕೆ. ಎಸ್., (2008), ಉತ್ತರ ಕರ್ನಾಟಕದ ಬಯಲಾಟಗಳು, ಕೃಷ್ಣಪುರ ದೊಡ್ಡಿ: ಮುದ್ದಪ್ಪ ಸ್ಮಾರಕ ಟ್ರಸ್ಟ್, ಪು.ಸಂ. 06
10. ಅದೇ, ಪು.ಸಂ. 06
11. ಅದೇ, ಪು.ಸಂ. 09
12. ಅಕ್ಷರ ಕೆ. ವಿ., (2000), ರಂಗ ಪ್ರಪಂಚ, ನವ ದೆಹಲಿ: ನ್ಯಾಷನಲ್ ಬುಕ್ ಇಂಡಿಯಾ, ಪು.ಸಂ. 31
13. ರಾಜೇಂದ್ರ ಡಿ. ಕೆ., (1986), ಮುರಾವು, ಮೈಸೂರು: ತಳಗವಾಡಿ ಪ್ರಕಾಶನ, ಪು.ಸಂ. 128
14. ಬೋರಲಿಂಗಯ್ಯ ಹಿ. ಚಿ., (2015), ಕರ್ನಾಟಕ ಜಾನಪದ ಕಲೆಗಳ ಕೋಶ, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಪು.ಸಂ. 134

**ಪರಾಮರ್ಶನ ಗ್ರಂಥಗಳು:**

1. ಅಕ್ಷರ ಕೆ. ವಿ., (2000), ರಂಗ ಪ್ರಪಂಚ, ನವ ದೆಹಲಿ: ನ್ಯಾಷನಲ್ ಬುಕ್ ಇಂಡಿಯಾ.
2. ಅಪ್ಪಗೆರೆ ತಿಮ್ಮರಾಜು, (2017), ಬದಲಾಗುತ್ತಿರುವ ಜಾನಪದ ಸಮಗ್ರ ಜಾನಪದ ಲೇಖನಗಳು, ಬೆಂಗಳೂರು: ಸಿರಿವರ ಪ್ರಕಾಶನ.
3. ಜಯಪ್ರಕಾಶ ಮಾವಿನಕುಳಿ, (2001), ರಂಗ ಪ್ರತಿಸ್ಪಂದನ, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
4. ಪಾರ್ಶ್ವನಾಥ್ ಎಚ್. ಎ., (1995), ರಂಗಸಂಗ, ಮೈಸೂರು: ನಿತಿನ್ ಪ್ರಕಾಶನ.
5. ಬಸವರಾಜ ಮಲ್ಲಶೆಟ್ಟಿ ಕೆ. ಎಸ್., (2008), ಉತ್ತರ ಕರ್ನಾಟಕದ ಬಯಲಾಟಗಳು, ಕೃಷ್ಣಪುರ ದೊಡ್ಡಿ: ಮುದ್ದಪ್ಪ ಸ್ಮಾರಕ ಟ್ರಸ್ಟ್.
6. ಭೀಮನಗೌಡ ಎಫ್. ಪಾಟೀಲ್, (2010), ರಂಗ ಪರದೆಗಳು, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
7. ಬೆಟಗೇರಿ ಕೃಷ್ಣಶರ್ಮಾ, (1976), ಕನ್ನಡ ಜಾನಪದ ಸಾಹಿತ್ಯ, ಧಾರವಾಡ: ಕರ್ನಾಟಕ ವಿಶ್ವವಿದ್ಯಾಲಯ.
8. ಬೋರಲಿಂಗಯ್ಯ ಹಿ. ಚಿ., (2015), ಕರ್ನಾಟಕ ಜಾನಪದ ಕಲೆಗಳ ಕೋಶ, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
9. ರಾಜೇಂದ್ರ ಡಿ. ಕೆ., (1986), ಮುರಾವು, ಮೈಸೂರು: ತಳಗವಾಡಿ ಪ್ರಕಾಶನ.